ಶ್ರೀ ಪಿ.ಜಿ.ಆರ್. ಸಿಂಧ್ಯ : ಅಷ್ಟೇ ಇನ್ನೇನೂ ಇಲ್ಲ.

(ಈ) ಮೈಸೂರು ಜಿಲ್ಲೆಗಳ 3 ಜನ ಶಾಸಕರುಗಳಿಗೆ ಆಗಸ್ಟ್ 15ರಂದು ತೋರಿದ ಮಲತಾಯಿ ಧೋರಣೆ.

ಶ್ರೀ ಶಂಕರ್ ಲಿಂಗೇಗೌಡ : ಸನ್ಮಾನ್ಯ ಅಧ್ಯಕ್ಷರೇ, ನಾವು ಈ ಸ್ವತಂತ್ರ ಭಾರತದ ಪ್ರತಿನಿಧಿಗಳೋ ಅಲ್ಲವೋ ಅನ್ನತಕ್ಕಂತಹ ಪ್ರಶ್ನೆಯನ್ನು ಈ ಸದನದಲ್ಲಿ ಹೇಳಬೇಕಾದುದು ಅನಿವಾರ್ಯವಾಗುತ್ತದೆ. ಕಾರಣವಾದರೂ ಇಷ್ಟೇ; ನಮ್ಮ ಜನತಾ ದಳದ ಸರ್ಕಾರ ಸ್ವಾಭಿಮಾನ, ಸದೃಢ, ಎಲ್ಲ ವರ್ಗದ ಜನರ ಹಿತವನ್ನು ಕಾಪಾಡುತ್ತದೆ ಎಂದು ಘೋಷಣೆಗಳ ಮುಖಾಂತರ ಈ ರಾಜ್ಯದ ಆಡಳಿತದ ಚುಕ್ಕಾಣಿಯನ್ನು ಹಿಡಿದರು. ಆದರೆ ನಮ್ಮ ಮೈಸೂರು ಜಿಲ್ಲೆಯಲ್ಲಿ ನಮ್ಮ ಉಸ್ತುವಾರಿ ಮಂತ್ರಿಗಳು ನಮಗೆ ಉಸಿರು ಕಟ್ಟುವಂತಹ ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ನಾವು ಪ್ರಬುದ್ಧ ಮತ್ತು ಪ್ರಜ್ಞಾವಂತ ಮತದಾರರಿಂದ ಆಯ್ಕೆಯಾಗಿ, ಎಲ್ಲಾ ವರ್ಗದ ಜನರನ್ನು ಓಲೈಸುವ ದಿಕ್ಕಿನಲ್ಲಿ ಕೆಲಸ ಮಾಡಿಕೊಂಡು ಹೋಗುತ್ತಿದ್ದರೂ ಕೂಡ, ಕುವೆಂಪುರವರು ಒಂದು ಮಾತನ್ನು ಹೇಳುತ್ತಾರೆ. "ಜಾತಿ ಮತಗಳ ಹೊಟ್ಟೆ ತೂರಿ ಎಲ್ಲ ತತ್ವಗಳ ಎಲ್ಲೆ ಮೀರಿ, ದಿಗ್ ದಿಗಂತದ ದತ್ತ ಏರಿ" ಕವಿಪುರವರ ವ್ಯಾಖ್ಯಾನವನ್ನು ಸೂಚಿಸಿಕೊಂಡು ಹೋಗತಕ್ಕಂತಹ ನಾವು, ನಮ್ಮನ್ನು 15ನೇ ಆಗಸ್ಟರಂದು ನಡೆದಂತಹ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮೂರು ಶಾಸಕರಿಗೂ ಕೂಡ ಮಲತಾಯಿ ಧೋರಣೆಯನ್ನು ತೋರುವುದರ ಮೂಲಕ, ನಮ್ಮನ್ನು ಗುರುತಿಸದೇ ನಮ್ಮನ್ನು ಕರೆಯದೇ ಇರತಕ್ಕಂಥದ್ದು ಪ್ರಜಾಪ್ರಭುತ್ವದ ಕಗ್ಗೊಲೆ ಎನ್ನತಕ್ಕಂತಹ ಮಾತನ್ನು ಕೂಡ ಸಿಟ್ಟಾಗಿ ಹೇಳಬೇಕಾಗುತ್ತದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ, ಮಂಡ್ಯದಲ್ಲಿ ಬಡವರಿಗೆ ಸೇವೆ ಸಲ್ಲಿಸದ ರಾಜಕಾರಣಿ, ಅಧಿಕಾರಿಯನ್ನು ಒದ್ದು ಹೊರಗಡೆ ಹಾಕಿ ಎನ್ನತಕ್ಕಂತಹ ಮಾತನಾಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಪ್ರಜಾ ಪ್ರತಿನಿಧಿಗಳಿಗೆ ಇರಬೇಕಾಗಿರತಕ್ಕಂತಹ ಹಕ್ಕನ್ನು ಇವರು ಖಂಡಿತವಾಗಿಯೂ ಕೊಟ್ಟಿಲ್ಲ. ನಮ್ಮ ಜನತಾ ದಳದವರು ತಮ್ಮ ಮೌಲ್ಯವನ್ನು ಕಳೆದುಕೊಂಡಿದ್ದಾರೆ ಅನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. 224 ಜನರು ಗೆದ್ದ ಮೇಲೆ ಎಲ್ಲಾ ವರ್ಗದವರು ಜನತೆಯ ಪ್ರತಿನಿಧಿಗಳ ಎಂದು ತಿಳಿದುಕೊಳ್ಳಬೇಕು, ಎಲ್ಲರಿಗೂ ಕೂಡ ಸಮಾನತೆ ಸಿಗಬೇಕೆಂದು ಸ್ಪಷ್ಟವಾಗಿ ನಾನು ಹೇಳಬಯಸುತ್ತೇನೆ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾದಂತಹ ಉತ್ತರವನ್ನು ಕೊಡಲಿ, ಇದಕ್ಕೆ ಅಧಿಕಾರಿಗಳು ಶಾಮೀಲಾಗಿದ್ದಾರೆಯೋ ಅಥವಾ ನಮ್ಮ ಉಸ್ತುವಾರಿ ಮಂತ್ರಿಗಳ ಕೈವಾಡವೋ ಏನು ಎಂಬುದು ನಮಗೆ ಶಂಕೆ ಮೂಡಿದೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) : ಜಿಲ್ಲಾ ಮಂತ್ರಿಗಳು ಸ್ವಾತಂತ್ರ್ಯ ದಿನಾಚರಣೆಯ ದಿನ ಬಾವುಟವನ್ನು ಹಾರಿಸುವಂಥದ್ದು ಸರ್ಕಾರದ ಆದೇಶವೇ ಇದೆ. ತಮಗೆ ಏನಾಯಿತು ನನಗೆ ಅರ್ಥವಾಗಲಿಲ್ಲ, ಅವರು ಹೇಳಿದ್ದು ಸಹ ನನಗೆ ಅರ್ಥವಾಗಲಿಲ್ಲ. ಬಾವುಟವನ್ನು ಹಾರಿಸುವಂಥದ್ದನ್ನು ಜಿಲ್ಲಾ ಮಂತ್ರಿಗಳು ಮಾಡುತ್ತಾರೆ. ಸಂಬಂಧಪಟ್ಟಂತಹ ಡಿವಿಜನ್ ಕಮಿಷನ್ ಎಲ್ಲಾರಿಗೂ ಆಹ್ವಾನ ಪತ್ರಿಕೆಯನ್ನು ಕಳುಹಿಸುತ್ತಾರೆ. ಈಗ ಏನು ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಾಗಲಿಲ್ಲ.

ಅಧ್ಯಕ್ಷರು : ಇವರ ಜಿಲ್ಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಆಹ್ವಾನ ಪತ್ರಿಕೆಯಲ್ಲಿ ಜಿಲ್ಲೆಯ ಯಾವ ಶಾಸಕರ ಹೆಸರನ್ನು ಮುದ್ರಣ ಮಾಡಿಲ್ಲ, ಇವರಿಗೆ ಯಾವುದೇ ರೀತಿಯ ಮನ್ನಣೆಯನ್ನು ಕೊಡಲಿಲ್ಲ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೇ, ಅಧಿಕಾರಿಗಳ ಮೇಲೆ ಹಸ್ತಕ್ಷೇಪ ಮಾಡಲಿಕ್ಕೆ ಹೊರಟ್ಟಿದ್ದಾರೆ ಉಸ್ತುವಾರಿ ಮಂತ್ರಿಗಳು. 10 ದಿವಸಗಳ ಕಾಲ ಅಧಿಕಾರಿಗಳು ಶಾಸಕರ ಜೊತೆಯಲ್ಲಿ ಕೆಸ ಮಾಡಬೇಕೆಂದು ಇದ್ದರೂ ಕೂಡ ಅದನ್ನು ಮಾಡಬಾರದೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ನಾನು ನಿಮಗೆ ಹೇಳಿದೆ ಕನ್ನಡವನ್ನು ನಿಧಾನವಾಗಿ ಮಾತನಾಡಿ ಎಂದು.

ಶ್ರೀ ವಿ. ಮಾರುತಿರಾವ್ ಪವಾರ್ : ಸನ್ಮಾನ್ಯ ಅಧ್ಯಕ್ಷರೇ, ಕಳಿದ ಅಧಿವೇಶನದ ಸಂದರ್ಭದಲ್ಲಿ ನಮ್ಮ ಕೆ. ಎಸ್. ಈಶ್ವರಪ್ಪನವರು ಈ ವಿಚಾರವನ್ನು ಎತ್ತಿದ್ದಾಗ ಸನ್ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿದ್ದಾರೆ.

ಅಧ್ಯಕ್ಷರು : ಜಿಲ್ಲಾ ಪಂಚಾಯ್ತಿತಿ ಛೇರ್ಮನ್ನರ ಅಧ್ಯಕ್ಷತೆ, ಜಿಲ್ಲಾ ಮಂತ್ರಿಗಳು ಅಲ್ಲಿ ಬಾವುಟವನ್ನು ಹಾರಿಸುತ್ತಾರೆ, ಇವರ ಹೆಸರುಗನ್ನು ಆ ಆಹ್ವಾನ ಪತ್ರಿಕೆಯಲ್ಲಿ ಸೇರಿಸಿರುವುದಿಲ್ಲ, ಉದ್ದೇಶ ಪೂರ್ವಕವಾಗಿ ನಮ್ಮನ್ನು ಕಡೆಗಣಿಸಿದ್ದಾರೆ ಎನ್ನುವುದು ಅವರ ವಾದ. ನಾವೆಲ್ಲ ಸಿಟಿಯಿಂದ ಆಯ್ಕೆಯಾಗಿರುವಂತಹ ಶಾಸಕರು ಎಂದು. Looking at this invitation, I think there is some truth in what they say. I think the proper authority should be...

ಶ್ರೀ ಹೆಚ್. ಡಿ. ದೇವೇಗೌಡ : ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಇದರೊಳಗೆ ಇಲ್ಲ, ಸರ್, ಇನ್ನು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಇದನ್ನು ಕೊಡುತ್ತಾರೆ.

ಅಧ್ಯಕ್ಷರು : ಅದರಲ್ಲಿ, ಇದರಲ್ಲಿ ಎಲ್ಲಿಯೂ ಇಲ್ಲ ಅವರನ್ನು ಬಿಟ್ಟು ಬಿಟ್ಟಿದ್ದಾರೆ ಅವರ ಹೆಸರನ್ನು ಪ್ರಿಂಟ್ಮಾಡಿಲ್ಲ, ನಮ್ಮನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ, ಎನ್ನುವುದು ಅವರ ಅಳಲು. ಶಾಸಕರಾಗಿ ಆಯ್ಕೆಯಾದ ಮೇಲೆ ಅವರನ್ನು ಎಲ್ಲಿಯಾದರೂ ಒಂದು ಕಡೆ ಸೇರಿಸಬೇಕಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಬಾವುಟ ಹಾರಿಸುವುದರಲ್ಲಿ ಯಾರ ಹೆಸರನ್ನು.. ಜಿಲ್ಲಾ ಅಧ್ಯಕ್ಷರು ಹೆಸರು ಇಲ್ಲ, ಸಾಂಸ್ಕೃತಿಕ ಕಾರ್ಯಕ್ರಮದ ವಿಷಯವನ್ನು ಹೇಳುತ್ತಿದ್ದೀರಿ, ಸಾಂಸ್ಕೃತಿಕ ಕಾರ್ಯಕ್ರಮದ ವಿಷಯದಲ್ಲಿ ನಾನು ಸಂಬಂಧಪಟ್ಟಂತಹ ಜಿಲ್ಲಾಧಿಕಾರಿಗಳಿಂದ ವಿಷಯವನ್ನು ತರಿಸುತ್ತೇನೆ. ಸಾಮಾನ್ಯವಾಗಿ ಯಾವ ಶಾಸಕರ ಹೆಸರನ್ನು ಹಾಕುವುದಿಲ್ಲ, ನಾವು ಪ್ರಯತ್ನ ಮಾಡಿದ್ದೇವೆ, ಅದು ಗವರ್ನಮೆಂಟ್ ಆಫ್ ಇಂಡಿಯಾ ಫ್ಲಾಗ್ ಕೋಡ್ ಅಂಡ್ ರೂಲ್ಸ್ ಅಡ್ಡ ಬಂತು ಎಂದು ಹೇಳಿ....

ಶ್ರೀ ಹೆಚ್.ಡಿ. ಬಸವರಾಜ್ : ಫ್ಲಾಗ್ ಹಾರಿಸುವುದು ನಮ್ಮ ಹಕ್ಕು, ಆ ಹಕ್ಕನ್ನು ಮೊಟಕು ಮಾಡಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ : ಫ್ಲಾಗ್ ಹಾಯಿಸ್ಟಿಂಗ್ ಹಕ್ಕಲ್ಲ, ಹಾಕುವುದಕ್ಕೆ ಬರುವುದಿಲ್ಲ, ಅವರು ಆಹ್ವಾನ ಪತ್ರಿಕೆಯನ್ನು ಕಳುಹಿಸಿಲ್ಲವೆಂದು ಹೇಳಲಿಲ್ಲ, if it is not sent, definitely it will be a lapse.

ಈಗಲೇ ವಿಚಾರ ಮಾಡುತ್ತೇನೆ. I Willcome back to the House.

(ಉ) ಮಾಜಿ ಮಂತ್ರಿ ಸಾಗರಪಳ್ಳಿ ರೇವಣ್ಣನವರನ್ನು ಜೈಲಿನಿಂದ ಬಿಡುಗಡೆ ಮಾಡುವ ಬಗ್ಗೆ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸನ್ಮಾನ್ಯ ಅಧ್ಯಕ್ಷರೇ, ಸಾಗರಪಳ್ಳಿ ರೇವಣ್ಣ ಎಂಬುವರು ಬಹಳ ಹಳೆಯ ಸದಸ್ಯರು, ಹಾಗೂ ಮಾಜಿ ಬಂದೀಖಾನೆ